**1023/1L1/LKAN01** **NOVEMBER 2016**

## PROSE DETAILED AND NON-DETAILED

(For those who joined in July 2010)

Time : Three hours Maximum : 100 marks

### SECTION A — (5 × 6 = 30 marks)

ಈ ಕೆಳಗಿನ ಏಳು ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ 100 ಪದಗಳಲ್ಲಿ ಉತ್ತರ ಬರೆಯಿರಿ.

1. ಮನುಷ್ಯ ಪ್ರಕೃತಿಯನ್ನು ಹೇಗೆ ಶೋಷಿಸುತ್ತಿದ್ದಾನೆ? ವಿವರಿಸಿರಿ.

2. ಯಾವುದರಿಂದ ಶಿಸ್ತು ಸಾಧ್ಯವೆಂದು ಸಿದ್ಧಾರ್ಥ ಹೇಳುತ್ತಾನೆ? ತಿಳಿಸಿರಿ.

3. ಪ್ರಾರ್ಥನೆ–ಪೂಜೆ ಮುಂತಾದ ಧಾರ್ಮಿಕ ಆಚರಣೆಗಳ ಬಗ್ಗೆ ಎಚ್. ನರಸಿಂಹಯ್ಯನವರ ನಿಲುವೇನು? ಸ್ಪಷ್ಟಪಡಿಸಿರಿ.

4. ಇಂದಿನ ಸ್ತ್ರೀವಾದಿ ವಿಜ್ಞಾನ ಯಾವುದನ್ನು ಒಪ್ಪಿಕೊಳ್ಳುತ್ತದೆ? ಪರಿಶೀಲಿಸಿರಿ.

5. ಚೋಮನು ಎತ್ತುಗಳ ಬಗ್ಗೆ ಹೊಂದಿದ್ದ ಮಮತೆಯು ಕಾದಂಬರಿಯಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿರಿ.

6. ಸಾಹಿತ್ಯದಲ್ಲಿ ವೈಚಾರಿಕ ಚಿಂತನೆಯ ಮಹತ್ವವೇನು? ನಿರೂಪಿಸಿರಿ.

7. ವಿಜ್ಞಾನ ಕ್ಷೇತ್ರವು ಸ್ತ್ರೀಯರನ್ನು ದೂರವಿಡಲು ಕಾರಣಗಳೇನು? ವಿಶ್ಲೇಷಿಸಿರಿ.

## SECTION B — (4 × 10 = 40 marks)

ಈ ಕೆಳಗಿನ **ಆರು** ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ 200 ಪದಗಳಲ್ಲಿ ಉತ್ತರ ಬರೆಯಿರಿ.

8. ಅನಕ್ಷರಸ್ಥರ ಪರಿಸರ ಪ್ರೀತಿಯನ್ನು ಲೇಖಕರು ಹೇಗೆ ಗುರುತಿಸಿದ್ದಾರೆ? ವಿವರಿಸಿರಿ.

9. "ದೇವರನ್ನು ತಲುಪಲು ಹೊರಟ ಸಿದ್ಧಾರ್ಥ ಮನುಷ್ಯರನ್ನು ತಲುಪಿದ" – ಈ ಹೇಳಿಕೆಯನ್ನು ಪರಿಶೀಲಿಸಿರಿ.

10. ದೈವಿಕತೆಯ ಹಿನ್ನೆಲೆಯಲ್ಲಿ ಲೇಖಕರ ವಿಚಾರಧಾರೆಯನ್ನು ಕುರಿತು ವಿಮರ್ಶಿಸಿರಿ.

11. "ವಿಜ್ಞಾನವು ಮಹಿಳೆಯ ಬದುಕನ್ನು ಬದಲಿಸುವ ವರದಾನವಾಗಿದೆ" ಎಂಬ ಅಭಿಪ್ರಾಯದ ಬಗ್ಗೆ ನಿಮ್ಮ ನಿಲುವೇನು? ತಿಳಿಸಿರಿ.

12. ಮತಾಂತರಕ್ಕೆ ಚೋಮನ ಮನಸ್ಸು ಒಪ್ಪದಿರಲು ಕಾರಣವೇನು? ಪರಿಶೀಲಿಸಿರಿ.

13. ವೈಚಾರಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಸಾಹಿತ್ಯದ ಪಾತ್ರವೇನು? ವಿವರಿಸಿರಿ.



## SECTION C — (2 × 15 = 30 marks)

ಈ ಕೆಳಗಿನ **ಮೂರು** ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ 300 ಪದಗಳಲ್ಲಿ ಉತ್ತರ ಬರೆಯಿರಿ.

14. ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯವನ್ನು "ಚೋಮನ ದುಡಿ" ಕಾದಂಬರಿಯು ಎಷ್ಟರ ಮಟ್ಟಿಗೆ ಧ್ವನಿಸುತ್ತದೆ? ಸ್ಪಷ್ಟಪಡಿಸಿರಿ.

15. ಬಾಪೂಜಿ ಅವರ ದಾರಿಯೂ ಕೂಡ ಬುದ್ಧನ ದಾರಿಯೇ ಆಗಿತ್ತು ಎಂದು ಲೇಖಕರು ಅಭಿಪ್ರಾಯಪಡಲು ಕಾರಣಗಳೇನು? ವಿವರಿಸಿರಿ.

16. ಈ ಕೆಳಗಿನವುಗಳಿಗೆ ಟಿಪ್ಪಣಿ ಬರೆಯಿರಿ.

(ಅ) ಚನಿಯ, ಗುರುವ

(ಆ) ಭ್ರೂಣಹತ್ಯೆ

(ಇ) ಅಮೃತಾದೇವಿ

(ಈ) ಜಂಭೋಜಿ

(ಉ) ಸಿಲೋನ್‌ದ ಬೋದಾ

———————

**1024/1L2/LKAN02** **NOVEMBER 2016**

# POETRY (ANCIENT AND MODERN) WITH APPLIED GRAMMAR, PROSODY AND COMPREHENSION

(For those who joined in July 2010 and after)

Time : Three hours Maximum : 100 marks

## SECTION A — (5 × 6 = 30 marks)

ಯಾವುದಾದರೂ <u>ಐದು</u> ಪ್ರಶ್ನೆಗಳಿಗೆ 100 ಪದಗಳಲ್ಲಿ ಉತ್ತರಿಸಿರಿ.

1. "ಉದರವೈರಾಗ್ಯವಿದು" ಕೀರ್ತನೆಯಲ್ಲಿ ತೋರಿಕೆಯ ಭಕ್ತಿಯನ್ನು ಹೇಗೆ ವಿಡಂಬಿಸಲಾಗಿದೆ? ಚರ್ಚಿಸಿರಿ.

2. ಉತ್ತರಕುಮಾರನ ಸಾರಥಿಯ ಪಾತ್ರವನ್ನು ಪರಿಚಯಿಸಿರಿ.

3. ಭಕ್ತಿಯ ಬಗ್ಗೆ ಸರ್ವಜ್ಞನು ತಳೆದಿರುವ ನಿಲುವನ್ನು ಪರಿಶೀಲಿಸಿರಿ.

4. ಚೆನ್ನಬಸವಣ್ಣನ ವಚನದ ಆಶಯವನ್ನು ನಿರೂಪಿಸಿರಿ.

5. ಕರ್ಣನ ಪಾತ್ರವನ್ನು ಪರಿಚಯ ಮಾಡಿಕೊಡಿರಿ.

6. ರತ್ನನ ಕನ್ನಡಾಭಿಮಾನವನ್ನು ವಿವರಿಸಿರಿ.

7. ವಿರುದ್ಧ ಪದಗಳನ್ನು ಬರೆಯಿರಿ.

(a) ಶೂರ (b) ಮೃದು

(c) ಅಳಿವು (d) ಶಾಂತಿ

(e) ಕಠಿಣ (f) ಗೆಲುವು

SECTION B — (4 × 10 = 40 marks)

ಯಾವುದಾದರೂ <u>ನಾಲ್ಕು</u> ಪ್ರಶ್ನೆಗಳಿಗೆ 200 ಪದಗಳಲ್ಲಿ ಉತ್ತರಿಸಿರಿ.

8. "ಆದಿಪುರಾಣ"ದ ನೀಳಾಂಜನೆಯ ನೃತ್ಯಪ್ರಸಂಗದ ಸ್ವಾರಸ್ಯವನ್ನು ಪರಿಶೀಲಿಸಿರಿ.

9. ಕರ್ಣ ಮತ್ತು ದುರ್ಯೋಧನರ ಸ್ನೇಹದ ಪಾವಿತ್ರ್ಯದ ಚಿತ್ರಣವು ಕಾವ್ಯದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

10. ಕನ್ನಡನಾಡಿನ ಹಿಂದಿನ ವೈಭವದ ಚಿತ್ರಣ "ಕನ್ನಡತಾಯನೋಟ" ಪದ್ಯದಲ್ಲಿ ಹೇಗೆ ಮೂಡಿ ಬಂದಿದೆ? ಪರಿಶೀಲಿಸಿರಿ.

11. ಸುಗ್ಗಿಯ ಸಂಭ್ರಮವನ್ನು ಕುರಿತು ವಿವರಿಸಿರಿ.

12. "ಜಡೆ" ಕವನದಲ್ಲಿ ಜಡೆಯ ವಿವರಗಳನ್ನು ಕವಿ ಹೇಗೆ ನಿರೂಪಿಸಿದ್ದಾರೆ? ಸ್ಪಷ್ಟಪಡಿಸಿರಿ.



13. ತತ್ಸಮ/ತದ್ಭವಗಳನ್ನು ಬರೆಯಿರಿ.

(a) ಕಬ್ಬ (b) ಕ್ಷಣ

(c) ದೀಪ (d) ಆಕಾಶ

(e) ಕೀರ್ತಿ

SECTION C — (2 × 15 = 30 marks)

ಯಾವುದಾದರೂ <u>ಎರಡು</u> ಪ್ರಶ್ನೆಗಳಿಗೆ 300 ಪದಗಳಲ್ಲಿ ಉತ್ತರಿಸಿರಿ.

14. ಉತ್ತರ ಕುಮಾರನ ಪ್ರಸಂಗದಲ್ಲಿ ಕುಮಾರವ್ಯಾಸನ ಹಾಸ್ಯ ಪ್ರತಿಭೆ ಹೇಗೆ ಪ್ರಕಟಗೊಂಡಿದೆ? ನಿರೂಪಿಸಿರಿ.

15. ತೆಂಕಣಗಾಳಿಯ ಅಬ್ಬರವನ್ನು ಕವಿ ಚಿತ್ರಿಸಿರುವ ಬಗೆಯನ್ನು ವಿವರಿಸಿರಿ.

16. ಈ ಕೆಳಗಿನ ಪದ್ಯಕ್ಕೆ ವ್ಯಾಖ್ಯಾನ ಬರೆಯಿರಿ :

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು?
ಎತ್ತು ಗಾಣವನು ಹೊತ್ತು ತಾ ನಿತ್ಯದಲ್ಲಿ
ಸುತ್ತಿ ಬಂದಂತೆ ! ಸರ್ವಜ್ಞ
ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು?
ಮನದಲ್ಲಿ ನೆನೆಯದಿರುವವನು ದೇಗುಲದ
ಕೊನೆಯಲ್ಲಿದ್ದೇನು? ಸರ್ವಜ್ಞ

**1025/1L3/LKAN03** **NOVEMBER 2016**

# HISTORY OF KANNADA LITERATURE

(For those who joined in July 2010 and after)

Time : Three hours Maximum : 100 marks

## SECTION A — (5 × 6 = 30 marks)

ಯಾವುದಾದರೂ ಐದನ್ನು 100 ಪದಗಳಲ್ಲಿ ವಿವರಿಸಿರಿ.

1. ಕುಮಾರವ್ಯಾಸನ ಉತ್ತರಕುಮಾರ.

2. ಪುರಂದರದಾಸರ ಕೀರ್ತನೆಗಳು.

3. ಅಕ್ಕಮಹಾದೇವಿಯ ವಚನಗಳ ಮಾಧುರ್ಯ.

4. ರತ್ನಾಕರನ ಭರತ ಮತ್ತು ಬಾಹುಬಲಿ.

5. ಸರ್ವಜ್ಞನ ವಚನಗಳ ಸ್ವಾರಸ್ಯ.

6. ಜನ್ನ ಕವಿಯ "ಯಶೋಧರ ಚರಿತೆ"ಯ ವಸ್ತು.

7. ಮುದ್ದಣನ ಗದ್ಯ.

## SECTION B — (4 × 10 = 40 marks)

ಯಾವುದಾದರೂ <u>ನಾಲ್ಕು</u> ಪ್ರಶ್ನೆಗಳಿಗೆ 200 ಪದಗಳಲ್ಲಿ ಉತ್ತರಿಸಿರಿ.

8. ರನ್ನ ಕವಿಯ "ಗದಾಯುದ್ಧ"ದಲ್ಲಿ ಭೀಮ ಮತ್ತು ದುರ್ಯೋಧನರ ಹೋರಾಟದ ಚಿತ್ರಣ ಹೇಗೆ ಮೂಡಿ ಬಂದಿದೆ? ಪರಿಶೀಲಿಸಿರಿ.

9. ನಾಗಚಂದ್ರನ "ಪಂಪರಾಮಾಯಣ"ದ ಸೀತಾಪಹರಣ ಪ್ರಸಂಗವನ್ನು ವಿವರಿಸಿರಿ.

10. "ಕರ್ನಾಟಕ ಕಾದಂಬರಿ"ಯ ಮಹಾಶ್ವೇತೆಯ ಪಾತ್ರವನ್ನು ಪರಿಚಯ ಮಾಡಿಕೊಡಿರಿ.

11. "ಕುಮಾರವ್ಯಾಸ ಭಾರತ"ವನ್ನು ಕೃಷ್ಣಕಥೆ ಎನ್ನಬಹುದೇ? ವಿಚಾರ ಮಾಡಿರಿ.

12. "ವಡ್ಡಾರಾಧನೆ" ಕೃತಿಯ ಸ್ವಾರಸ್ಯವನ್ನು ಪರಿಶೀಲಿಸಿರಿ.

13. ನಾಟಕ ಸಾಹಿತ್ಯದ ಉಗಮ ಮತ್ತು ವಿಕಾಸವನ್ನು ಕುರಿತು ವಿವರಿಸಿರಿ.



## SECTION C — (2 × 15 = 30 marks)

ಯಾವುದಾದರೂ <u>ಎರಡು</u> ಪ್ರಶ್ನೆಗಳಿಗೆ 300 ಪದಗಳಲ್ಲಿ ಉತ್ತರಿಸಿರಿ.

14. ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮವನ್ನು ಪರಿಚಯಿಸಿರಿ.

15. ವಚನ ಸಾಹಿತ್ಯದ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಮಹತ್ವವನ್ನು ನಿರೂಪಿಸಿರಿ.

16. ಕನ್ನಡ ಕಾದಂಬರಿ ಪ್ರಕಾರದ ಮೊದಲ ಹಂತವನ್ನು ಕುರಿತು ವಿವರಿಸಿರಿ.

———————

**1026/1L4/LKAN04** **NOVEMBER 2016**

# KANNADA SHORT STORIES

(For those who joined in July 2010 and after)

Time : Three hours Maximum : 100 marks

## PART A — (5 × 6 = 30 marks)

ಯಾವುದಾದರೂ <u>ಐದು</u> ಪ್ರಶ್ನೆಗಳಿಗೆ ಉತ್ತರಿಸಿರಿ.

1. "ಕ್ಲಿಪ್ ಜಾಯಿಂಟ್"ನಲ್ಲಿ ಕೇಶವನಿಗೆ ನಿರಾಶೆಯುಂಟಾಗಲು ಕಾರಣವೇನು? ತಿಳಿಸಿರಿ.

2. ಮಂಗಮ್ಮ ಮತ್ತು ಅವಳ ಸೊಸೆಯ ಸಂಬಂಧ ಹದಗೆಟ್ಟದ್ದು ಏಕೆ? ವಿವರಿಸಿರಿ.

3. "ಸೆರೆ" ಕಥೆಯ ಕೆಲಸದ ಹುಡುಗಿ ದೇವಿಯ ಪಾತ್ರವನ್ನು ಪರಿಚಯಿಸಿರಿ.

4. ಬೋಬಣ್ಣನ ಮನಸ್ಸಿನಲ್ಲಿ ಉಂಟಾದ ಸಣ್ಣ ಕುತೂಹಲ ಅವನ ಬದುಕಿನ ದುರಂತಕ್ಕೆ ಕಾರಣವಾಯಿತೇ? ವಿವರಿಸಿರಿ.

5. "ಮೊಸರಿನ ಮಂಗಮ್ಮ" ಕಥೆಯ ಮಗುವಿನ ಪಾತ್ರವನ್ನು ಮುರಿದುಬಿದ್ದ ಸಂಬಂಧಗಳನ್ನು ಬೆಸೆಯುವ ಕೊಂಡಿ ಎನ್ನಬಹುದೇ? ವಿಚಾರಮಾಡಿರಿ.

6. "ಕ್ಲಿಪ್ ಜಾಯಿಂಟ್" ಕಥೆಯಲ್ಲಿ ಮೂಡಿಬಂದಿರುವ ಕೇಶವನ ಭಾರತೀಯ ಕುಟುಂಬದ ಚಿತ್ರಣವನ್ನು ಕುರಿತು ವಿವರಿಸಿರಿ.

7. ಅಮಾಸನ ಪಾತ್ರವನ್ನು ಪರಿಚಯಿಸಿರಿ.

PART B — (4 × 10 = 40 marks)

ಯಾವುದಾದರೂ ನಾಲ್ಕು ಪಾತ್ರಗಳನ್ನು ಪರಿಚಯಿಸಿರಿ.

8. ಬರ್ಮಾಚಾರಿ

9. ಕಾವೇರಿ

10. ಕೆಲಸದ ಹುಡುಗಿ ದೇವಿ

11. ಕುರಿಯಯ್ಯ

12. ಮಾಚಮ್ಮ

13. ಸ್ಟೂ ಅರ್ಟ್

PART C — (2 × 15 = 30 marks)

ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

14. ಗ್ರಾಮೀಣ ಜನರ ಮುಗ್ಧ ಬದುಕಿನ ಬವಣೆಗಳನ್ನು ತೇಜಸ್ವಿ ಅವರು "ಅಬಚೂರಿನ ಪೋಸ್ಟಾಫೀಸು" ಕಥೆಯಲ್ಲಿ ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ.



15. ಯು.ಆರ್. ಅನಂತಮೂರ್ತಿ ಅವರ "ಕ್ಲಿಪ್ ಜಾಯಿಂಟ್" ಕಥೆಯ ಆಶಯವನ್ನು ಪರಿಶೀಲಿಸಿರಿ.

16. "ಸೆರೆ" ಕಥೆಯ ಮಹತ್ವವೇನು? ವಿಚಾರಮಾಡಿರಿ.